ದಿನಾಂಕ ಃ10–01–2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ಕೆಕೆ.ಆರ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಲಿಖಿತ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ಸದರಿ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆ ಸಾಕ್ಷಿಯ ಭಾಗವಾಗಿ ಪರಿಗಣಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಶ್ರೀ ಎಎಸ್ ಎಂ ಪಿ ವಕೀಲರು ಎದುರುದಾರರ ಪರವಾಗಿ ಃ**

ಅಪಗಾತವಾದ 25 ದಿನದ ನಂತರ ನಾನು ಮಾನವಿ ಪೋಲಿಸ್ ಠ್ಠಾಣೆಗೆ ಹೋಗಿ ದೂರು ನೀಡಿರುತೇನೆ. ನಾನು ದಿಃ 3.7.2022 ರಂದು ಬ್ಗೆ 9.30 ಗಂಟೆಗೆ ಠಾಣೆಗೆ ಹೋಗಿದೆನು. 1 ನೇ ಎದುರುದಾರ ಮೃತ ಮೌಲಾಲಿ ಸಾಬ್ ಇವರ ಸಂಬಂದಿಕ ಎಂದರೆ ಸರಿಯಲ್ಲ ಸಾಕ್ಷಿ ಅವರಿಬ್ಬರೂ ಒಂದೇಮಿಲ ನಲಿ ಕೆಲಸ ಮಾಡುತಿದ್ದರು ಎಂದು ನುಡಿಯುತ್ತಾರೆ, ಅಪಗಾತದ ಕುರಿತು ನನಗೆ ನನ್ನ ಚಿಕ್ಕಪನ ಮಗ ಖಾಜಾ ಹುಸೇನ್ ದೂರವಾಣಿ ಮೂಲಕ ತಿಳಿಸಿದ್ದರು. ಆಗ ನಾನು ಮತ್ತು ದೌಲಸಾಬ ಸೇರಿ ಅಪಗಾತ ಸ್ಥಳಕ್ಕೆ ಹೋಗಿದೆವು. ಅಪಗಾತ ಸ್ಥಳದಲಿ 1 ನೆ ಎದುರುದಾರನು ಹಾಜರಿದೆನು. ನಾನು 10 ತರಗತಿವರೆಗೆ ವಿದ್ಯಾಬ್ಯಾಸ ಮಾಡಿರುತೇನೆ.

2. ನನ್ನ ಮೃತ ತಮ್ಮನನು ಕರೆದುಕೊಂಡು ಮಾನವಿ ಆಸ್ಪತ್ರೆಗೆ ಹೋಗಿದೆವು. ನಾವು ಮಾನವಿ ಆಸ್ಪತ್ರೆಯ ವೈದ್ಯರಿಗೆ ನನ್ನ ತಮ್ಮ ವಾಹನ ಸ್ಕಿಡಾಗಿ ಅಪಗಾತಕಿಡಾದ ಬಗೆ ತಿಳಿಸಿದೆವು. ನಾವು ಕೂಡಲೇ ಮಾನವಿ ಪೂಲಿಸ ಠಾಣೆಗೆ ಹೋಗಿ ದೂರು ನೀಡಲು ಪ್ರಯತ್ನಿಸಿರುವುದಿಲ್ಲ. ನ್ನನ ತಮ್ಮ ಬೇರೆ ಕಡೆಗೆ ಬಿದಿದ್ದು ಗಾಯಗೊಂಡಿದ್ದು ಆತನು ತೀರಿಕೊಂಡ ನಂತರ ಪರಿಹಾರ ಪಡೆಯುವ ಉದೆಶದಿಂದ ನಾನು , ಅರ್ಜಿದಾರರು , 1 ನೇ ಎದುರುದಾರ ಪೂಲಿಸರೊಂದಿಗೆ ಸೇರಿಕೊಂಡು ಸುಳು ಪ್ರಕರಣ ದಾಖಲಿಸಿರುತೇವೇ ಎಂದರೆ ಸರಿಯಲ್ಲ.ನನ್ನ ತಮ್ಮ ಮೋ ಸೈ ನಂ ಕೆಎಃ36/ಇಜೆಡ್ -1770 ನೇದ್ದರ ಮೆಲೆ ಹೋಗುತ್ತಿದಾಗ ಅಪಗಾತಕಿಡಾಗಿರುವುದಾಗಿ ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ಅಪಗಾತವಾದ 28 ದಿನದ ನಂತರ ನನ್ನ ತಮ್ಮ ತೀರಿಕೊಂಡಿರಿರುತ್ತಾನೆ. ಆತ ತೀರಿಕೊಂಡ ನಂತರ ನಾವು ದೂರು ನೀಡಿರುತೇವೆ. ನನ್ನ ತಮ್ಮನ

ಕುಟುಂಬಕೆ ಅನುಕೂಲ ಮಾಡುವ ಉದೇಶದಿಂದ ಸುಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

ಓ. ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು,
ರಾಯಚೂರು.